## 12. ಹುಲಿ ಸಂಖ್ಯೆ: ನಾಗರಹೊಳೆ ನಂ.2, ಬಂಡೀಪುರ ನಂ.3

ಹುಲಿ ಗಣತಿ ಮುಗಿದ 1 ವರ್ಷದ ನಂತರ ಅದರ ವಿಸ್ತೃತ ವರದಿ ಪ್ರಕಟಗೊಂಡಿದೆ. ಹುಲಿಗಳ ಸಂಖ್ಯೆಯಲ್ಲಿ ಕರ್ನಾಟಕದ ನಾಗರಹೊಳೆ ಅಭಯಾರಣ್ಯ ದೇಶದಲ್ಲೇ 2ನೇ ಸ್ಥಾನ ಹಾಗೂ ಬಂಡೀಪುರ 3ನೇ ಸ್ಥಾನ ಪಡೆದಿವೆ. ಉತ್ತರಖಂಡದ ಕಾರ್ಬೆಟ್ ಹುಲಿ ರಕ್ಷಿತಾರಣ್ಯ ಭಾರತದ ನಂ.1 ಹುಲಿ ಆವಾಸ ಸ್ಥಾನ ಎನ್ನಿಸಿಕೊಂಡಿದೆ. ಇದೇ ವೇಳೆ, ರಾಜ್ಯವಾರು ಸಂಖ್ಯೆ ಗಮನಿಸಿದಾಗ ದೇಶದಲ್ಲೇ ಅತಿ ಹೆಚ್ಚು ಹುಲಿ ಹೊಂದಿರುವ ರಾಜ್ಯ ಮಧ್ಯಪ್ರದೇಶ (526)ವಾಗಿದ್ದು, ನಂತರದ ಸ್ಥಾನವನ್ನು ಕರ್ನಾಟಕ (524) ಪಡೆದಿದೆ.

ಜುಲೈ 29 ವಿಶ್ವ ಹುಲಿ ದಿನಾಚರಣೆ, ಕೇಂದ್ರ ಪರಿಸರ ಸಚಿವ ಪ್ರಕಾಶ್ ಜಾವಡೇಕರ್ 4ನೇ 'ಅಖಿಲ ಭಾರತ ಹುಲಿ ಅಂದಾಜು–2018' ಹೆಸರಿನ 600 ಪುಟಗಳ ವರದಿ ಬಿಡುಗಡೆ ಮಾಡಿದರು. ಇದರಲ್ಲಿ ರಾಜ್ಯವಾರು ಹುಲಿಗಳ ಅಂಕಿ–ಅಂಶವಿದೆ. ದೇಶದಲ್ಲಿ ಈಗ ಹುಲಿ ರಕ್ಷಿತಾರಣ್ಯಗಳಲ್ಲಿ 1923 ಹುಲಿಗಳಿವೆ. ಇದು ದೇಶದ ಒಟ್ಟಾರೆ ಹುಲಿಗಳ ಸಂಖ್ಯೆಯ ಶೇ.65 ರಷ್ಟಾಗಿದೆ.

**ಎಲ್ಲಿ ಎಷ್ಟು ಹುಲಿ:** ಉತ್ತರಾಖಂಡದ ಕಾರ್ಬೆಟ್ ಅರಣ್ಯದಲ್ಲಿ 231 ಹುಲಿಗಳು ಇದ್ದು, ದೇಶದಲ್ಲೇ ಅತಿ ಹೆಚ್ಚು ಹುಲಿಗಳ ತಾಣ ಎನ್ನಿಸಿಕೊಂಡಿದೆ. 2ನೇ ಸ್ಥಾನದಲ್ಲಿ ಕರ್ನಾಟಕದ ನಾಗರಹೊಳೆ (127 ಹುಲಿ) ಹಾಗೂ ಬಂಡೀಪುರ (126) ಇವೆ. ಅಸ್ಸಾಂನ ಕಾಜಿರಂಗಾ ಹಾಗೂ ಮಧ್ಯಪ್ರದೇಶದ ಬಾಂಧವಗಢ ಅರಣ್ಯದಲ್ಲಿ ತಲಾ 104 ಹುಲಿಗಳಿವೆ.

ಕರ್ನಾಟಕದ ಅಣಶಿ–ದಾಂಡೇಲಿ ಅಭಯಾರಣ್ಯ, ಒಡಿಶಾದ ಸಿಮಿಲಿಪಾಲ್, ಆಂಧ್ರಪ್ರದೇಶದ ಶ್ರೀಶೈಲ, ತೆಲಂಗಾಣದ ಕಾವಾಲ್ ಹಾಗೂ ಆದಿಲಾಬಾದ್, ಜಾರ್ಖಂಡ್‌ನ ಪಲಾಮು, ಮಧ್ಯಪ್ರದೇಶದ ಸಂಜಯ್ ಡುಬ್ರಿ, ಅಸ್ಸಾಂನ ನಮೇರಿ ಹಾಗೂ ಮನಾಸ್, ಪ.ಬಂಗಾಳದ ಬುಕ್ಸಾ, ಮಿಜೋರಾಂನ ಡಂಪಾ, ಅರುಣಾಚಲ ಪ್ರದೇಶದ ಪಕ್ಕೆಯಲ್ಲಿ ಎಷ್ಟು ಹುಲಿ ಇರಬಹುದು ಎಂದು ಅಂದಾಜಿಸಲಾಗಿತ್ತೋ ಅದಕ್ಕಿಂತ ಕಡಿಮೆ ಹುಲಿಗಳು ಕಂಡುಬಂದಿವೆ. 'ಅರ್ಥಾತ್ ಇಲ್ಲಿ ಹುಲಿಗಳ ಸಂಖ್ಯೆ ಕುಸಿತಗೊಂಡಿದೆ. ಹುಲಿ ಸಂರಕ್ಷಣೆಗೆ ಹೆಚ್ಚಿನ ಕೆಲಸ ಇಲ್ಲಿ ಆಗಬೇಕಿದೆ ಎಂದರ್ಥ' ಎಂದು ವರದಿ ಹೇಳಿದೆ.

ಆಧಾರ:ಕನ್ನಡಪ್ರಭ, ದಿನಾಂಕ:29.07.2020